ಕಟ್ಟಡದ ಸಂಪೂರ್ಣ ಉಪಯೋಗವನ್ನು ಜನರು ಪಡೆದುಕೊಳ್ಳಲು ಅಗತ್ಯವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಇನ್ನು ಹೊಸ ಕೋರ್ಟ್ ಕಟ್ಟಡಗಳ ವಿಚಾರವಾಗಿ ತಾವು ಪ್ರಸ್ತಾಪಿಸಿರುವುದಕ್ಕೆ, ಇದು ರಾಜ್ಯ ಸರ್ಕಾರದ ಸಂಪನ್ಮೂಲವನ್ನು ಅವಲಂಬಿಸಿರುವ ವಿಚಾರವಾಗಿದೆ. ಆದುದರಿಂದ, ಆ ಪ್ರಶ್ನೆ ಬಂದಾಗ ಅದಕ್ಕೊಂದು ಪರಿಹಾರ ಹುಡುಕಬೇಕು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಮುಂಗಾರು ಬೆಳೆ ವಿಮೆ ಕುರಿತಂತೆ ಸ್ಪಷ್ಟವಾಗಿ ಏನನ್ನೂ ಹೇಳಲಿಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರಾದ ಪುಟ್ಟರಂಗನಾಥ್‌ರವರು ಸಾಕಷ್ಟು ಬಾರಿ ಕೇಳಿದರು. ಮುಂಗಾರು ಬೆಳೆ ವಿಮೆ ಹಣ ಬಿಡುಗಡೆ ಬಗ್ಗೆ ಏನನ್ನೂ ಹೇಳಿಲ್ಲ ನಂತರ, ಒಂದು ವರ್ಷ ಕಾಲ ಬಡ್ಡಿ ಮನ್ನಾ ಮಾಡುವಂತಾದ್ದು. Khariff ಬೆಳೆಗೆ ಸಂಬಂಧಿಸಿದಂತೆಯೂ ಮುಖ್ಯಮಂತ್ರಿಗಳು ಅಷ್ಟೇ ಹೇಳಿದರು. ಆದರೆ, ಮುಂಗಾರು ಬೆಳಗಾಗಿ ರೈತರು ಮಾಡಿರುವ ಸಾಲವೇನಿದೆ, ಅದರ ಮೇಲೆ ವಿಧಿಸಿರುವ ಬಡ್ಡಿಯನ್ನು ಮನ್ನಾ ಮಾಡಬೇಕು. ಇನ್ನು ವಿದ್ಯುತ್ ಅಭಾವದ ಕುರಿತಂತೆ ಪರಿಹಾರ ಹುಡುಕುವ ಬಗ್ಗೆ ಏನೂ ಹೇಳಿರುವುದಿಲ್ಲ. K-RIDE ಬಗ್ಗೆ ಅವರ ಕಾಂಟ್ರಿಬ್ಯೂಷನ್ ಏನೂ ಇಲ್ಲ. ಇದನ್ನು ಕೇವಲ ಕೇಂದ್ರ ಸರ್ಕಾರದ ಮೇಲೆ ಹಾಕುವಂತಾದ್ದು ಅಲ್ಲದೆ, ಇವೊತ್ತು ರೈತರ ಆತ್ಮಹತ್ಯೆ ಕುರಿತಂತೆ ಅವರ ಕುಟುಂಬದವರಿಗೆ ಪರಿಹಾರ ಧನ ಕೊಡುವ ವಿಷಯದಲ್ಲಿ ಚಕಾರವೆತ್ತಿಲ್ಲ. ಹೀಗಾಗಿ ಇವೊತ್ತು ಸರ್ಕಾರ ಸರಿಯಾದಂಥ ಉತ್ತರ ಕೊಟ್ಟಿಲ್ಲ, ರೈತರಿಗೆ ಅನುಕೂಲವಾಗುವಂಥ ಕೆಲಸವನ್ನೂ ಮಾಡಲಿಲ್ಲ ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸದನದಿಂದ ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಪಕ್ಷಕ್ಕೋಸ್ಕರ, ಸಾರ್ವಜನಿಕರಿಗೆ ತಿಳಿವಳಿಕೆ ಕೊಡುವುದಕ್ಕೋಸ್ಕರ ಅವರು ಸಭಾತ್ಯಾಗ ಮಾಡಲಿ. ಈ ಗಲಭೆಯಲ್ಲಿ ಪತ್ರಿಕೆಯಲ್ಲಿ ಏನು ವರದಿಯಾಗುತ್ತದೆಂದರೆ, 'ಗೊಂದಲವಾಯಿತು, ಬರಲೇ ಇಲ್ಲ' ಎಂದು ಬರುತ್ತದೆ. ಅವರು ಹೋದ ನಂತರ ಈಗ ಮಾಡಿ.

## ವಂದನಾ ನಿರ್ಣಯ ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು:- "ಫೆಬ್ರವರಿ 27, 2003 ರಂದು ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎನ್ನುವ ಪ್ರಸ್ತಾವವನ್ನು ಅಂಗೀಕರಿಸುವುದು.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಂದನಾ ನಿರ್ಣಯ ಪ್ರಸ್ತಾವಕ್ಕೆ ಸಭೆಯು ಅನುಮತಿ ನೀಡಿತು.**

ಅಧ್ಯಕ್ಷರು:- ಈ ಸದನವು ಅಂಗೀಕರಿಸಿದ ವಂದನಾ ನಿರ್ಣಯವನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

ಈಗ ಭೋಜನ ವಿರಾಮ. ಮಾನ್ಯ ಮಂತ್ರಿಗಳಾದ ಮಲ್ಲಿಕಾರ್ಜುನ್ ಖರ್ಗೆಯವರು ತಮಗೆಲ್ಲರಿಗೂ ಬಾಂಕ್ವೆಟ್ ಹಾಲ್‌ನಲ್ಲಿ ಭೋಜನ ಏರ್ಪಡಿಸಿದ್ದಾರೆ. ದಯಮಾಡಿ ತಾವೆಲ್ಲರೂ ಪಾಲ್ಗೊಳ್ಳಬೇಕೆಂದು ನನ್ನ ವಿನಂತಿ.